<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.2827/2021</u>

| | | | |
|---|---|---|---|
| ಹೆಸರು | : | ಲೀಲಾ | ಪಿ.ಡಬ್ಲ್ಯೂ :1 |
| ತಂದೆ ಹೆಸರು | : | ಆನಂದ ಪ್ರಸಾದ್ | ಸಿ.ಡಬ್ಲ್ಯೂ :1 |
| ವಯಸ್ಸು | : | 49 ವರ್ಷ | |
| ಉದ್ಯೋಗ | : | ಟೈಲರಿಂಗ್ ಕೆಲಸ | |
| ವಾಸಸ್ಥಳ | : | ಮಾರುತಿ ನಗರ ಗುಬ್ಬಿ | |

ಸಾಕ್ಷಿಯನ್ನು ದಿಃ13-06-2024 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ಚಾಸಾ -2 ನನ್ನ ಮಗಳು , ಚಾಸಾ -3 ನನ್ನ ಸ್ನೇಹಿತೆ . ದಿಃ 04-11-2021 ರಂದು ಮಧ್ಯಾಹ್ನ ಸುಮಾರು 2.00 ಗಂಟೆ ಸಮಯದಲ್ಲಿ ನನ್ನ ಗಂಡನನ್ನು ನೋಡಲು ತೋಟದ ಬಳಿಗೆ ಹೋಗಿದ್ದೆ . ಅಲ್ಲಿ 4 ಮತ್ತು 5 ಆರೋಪಿತರುಗಳು ತೋಟದ ಬಳಿ ಏಕೆ ಬಂದಿದ್ದೀಯಾ ಹೊರಗೆ ಹೋಗು ಎಂದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದರು . ನಾನು ನನ್ನ ಗಂಡನಿಗೆ ಕರೆ ಮಾಡಿ ವಿಚಾರ ತಿಳಿಸಿದೆ, ಅವರು ನಾನು ನಿಟ್ಟೂರಿನಲ್ಲಿ ಇದ್ದೇನೆ ಅಲ್ಲಿಯೇ ಇರು ಎಂದು ತಿಳಿಸಿದರು . 3 ನೇ ಆರೋಪಿತರು ಚಾಸಾ -2 ರವರನ್ನು ತಳ್ಳಿ ಹಲ್ಲೆ ಮಾಡಿದರು, ನಂತರ ನನ್ನನ್ನು ತಳ್ಳಿ ನನ್ನ ಮೇಲೆ ಹಲ್ಲೆ ಮಾಡಿದರು . ನಂತರ ಅಲ್ಲಿಗೆ ಬಂದ 1 ನೇ ಆರೋಪಿತರು ತಮ್ಮ ಶೂ ನಿಂದ ನನ್ನ ಬೆನ್ನಿನ ಮೇಲೆ ಹೊಡೆದರು ತಮ್ಮ ಕೈ ಗಳಿಂದ ನನ್ನ ಕೆನ್ನೆಯ ಮೇಲೆ ಹೊಡೆದರು . ನನ್ನ ಹಿರಿಯ ಮಗಳು ಹೇಮ ಪ್ರಸಾದ್ ರವರಿಗೆ ನಿಶ್ಚಿತಾರ್ಥ ನಡೆದು 1 ವರ್ಷ ಆಗಿತ್ತು, ಅವರ ವಿವಾಹದ ಸಂಬಂಧ ಹಣ ನೀಡುತ್ತೇವೆ ಎಂದು 1 ನೇ ಆರೋಪಿತರು ತಿಳಿಸಿದ್ದರು, 1 ವರ್ಷವಾದರೂ ಹಣ ನೀಡದೆ ಭೇಟಿಗೂ ಸಹಾ ಸಿಗದೆ ಇದ್ದ ಕಾರಣ ಅದನ್ನು ಕೇಳುವ ಸಲುವಾಗಿ ತೋಟದ ಬಳಿ ಹೋಗಿದ್ದೆ . 1 ಮತ್ತು 3 ನೇ ಆರೋಪಿತರುಗಳು ಚಾಸಾ -3 ರವರ ಮೇಲೂ ಸಹಾ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ . ಆಕೆ ನಮ್ಮ ಜೊತೆ ಬಂದಿದ್ದ ಕಾರಣ ನೀನು ಯಾರು ಏಕೆ ಬಂದಿದ್ದೀಯಾ ಎಂದು ಅವರುಗಳು ಆಕೆಯ ಮೇಲೂ ಸಹಾ ಹಲ್ಲೆ ಮಾಡಿದ್ದಾರೆ .

1 ಮತ್ತು 3 ನೇ ಆರೋಪಿತರುಗಳು ಮತ್ತೊಮ್ಮೆ ಜಮೀನಿನ ಬಳಿ ಬಂದರೆ ನಿನ್ನನ್ನು ಕತ್ತರಿಸಿ ಹೂತು ಬಿಡುವುದಾಗಿ ಬೆದರಿಕೆ ಒಡ್ಡಿದರು . ಜಮೀನಿನಿಂದ ನಮಗೆ ಹೊರಗೆ ಕಳುಹಿಸಿದರು . 10 ನಿಮಿಷದ ನಂತರ ಪೊಲೀಸರು ಅಲ್ಲಿಗೆ ಬಂದ ಕಾರಣ ಆರೋಪಿತರುಗಳು ಅಲ್ಲಿಂದ ಹೊರಟು ಹೋದರು . ನಂತರ ನಾನು , ಚಾಸಾ -2 ಮತ್ತು 3 ರವರು ಆಸ್ಪತ್ರೆಗೆ ಹೋದೆವು, ಅಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದು ನಂತರ ಠಾಣೆಯಲ್ಲಿ ದೂರು ನೀಡಿದ್ದೇನೆ .

ಸಾಕ್ಷಿಯು ದೂರು ಮತ್ತು ಸಹಿಯನ್ನು ಗುರುತಿಸಿದ್ದಾರೆ . ಅದನ್ನು ನಿಪಿ-1 ಮತ್ತು ನಿಪಿ-1(ಎ) ಎಂದು ಗುರುತಿಸಲಾಯಿತು. ಆರೋಪಿತರಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ 1 , 3 ರಿಂದ 5 ಆರೋಪಿತರುಗಳನ್ನು ಗುರುತಿಸಿದ್ದಾರೆ . ಸಾಕ್ಷಿಯು ಮಹಜರ್ ಮತ್ತು ಸಹಿಯನ್ನು ಗುರುತಿಸಿದ್ದಾರೆ . ಅದನ್ನು ನಿಪಿ -2 ಮತ್ತು ನಿಪಿ -2 (ಎ) ಎಂದು ಗುರುತಿಸಲಾಯಿತು . ದಿಃ 09-11-2021 ರಂದು ಪೊಲೀಸರು ಸ್ಥಳ ಮಹಜರಿಗೆ ಬಂದಿದ್ದರು . ನಾನೇ ಪೊಲೀಸರಿಗೆ ಗಲಾಟೆ ನಡೆದ ಸ್ಥಳವನ್ನು ತೋರಿಸಿದ್ದೇನೆ . ಸ್ಥಳದಲ್ಲಿ ಚಾಸಾ-4 ಮತ್ತು 5 ರವರು ಸಾಕ್ಷಿಗಳಾಗಿ ಹಾಜರಿದ್ದರು . ಮಧ್ಯಾಹ್ನ 1.00 ಗಂಟೆಯಿಂದ 1.30 ರ ಅವಧಿಯಲ್ಲಿ ಮಹಜರು ಕ್ರಮ ಜರುಗಿಸಲಾಯಿತು . ನಂತರ ನಾವು ಠಾಣೆಗೆ ಹೋಗಿದ್ದೆವು .ಚಾಸಾ -2 ಮತ್ತು 3 ರವರು ಆರೋಪಿತರುಗಳು ಗಲಾಟೆ ಮತ್ತು ಹಲ್ಲೆ ಮಾಡಿದ್ದ ವಿಡಿಯೋಗಳನ್ನು ಮಾಡಿದ ಸಂಬಂಧ ಸಿ ಡಿ ಯನ್ನು ಪೊಲೀಸರಿಗೆ ನೀಡಿದೆವು . ಘಟನೆಯ ಕುರಿತು ನಾವು ನ್ಯಾಯಾಧೀಶರ ಸಮಕ್ಷಮ ಹೇಳಿಕೆ ನೀಡಿದ್ದೇನೆ .

ತೆರೆದ ನ್ಯಾಯಾಲಯದಲ್ಲಿ ಮೊಹರು ಹಾಕಿರುವ ಲಕೋಟೆಯನ್ನು ತೆರೆದು ಅದರ ಒಳಗೆ ಲಭ್ಯವಿದ್ದ ಹೇಳಿಕೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಅದನ್ನು ಮತ್ತು ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ . ಸಾಕ್ಷಿಯು ಗುರುತಿಸಿದ ಹೇಳಿಕೆಯನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3 (ಎ) ಎಂದು ಗುರುತಿಸಲಾಯಿತು.

ನಾವು ಹೋಂಡಾ ಆಕ್ಟೀವಾ ವಾಹನದಲ್ಲಿ ತೋಟದ ಬಳಿ ಹೋಗಿದ್ದೆವು . 4 ನೇ ಆರೋಪಿತರು ವಾಹನದ ಕೀ ಯನ್ನು ಕಿತ್ತುಕೊಂಡು ಚಕ್ರದ ಗಾಳಿ ತೆಗೆದರು, ಇಲ್ಲಿಂದ ಹೇಗೆ ಹೋಗುತ್ತಿರಾ ಎಂದು ಬೆದರಿಕೆ ಒಡ್ಡಿದರು .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನನ್ನ ಗಂಡನ ಹೆಸರು ಚಿಕ್ಕನಾಯಕನಹಳ್ಳಿಯ ಗಂಟಲಗೆರೆಯ ನಾಗರಾಜು ಎಂದರೆ ಸರಿಯಲ್ಲ . 1 ನೇ ಆರೋಪಿತರು ನನ್ನ ಗಂಡ ಎಂದು ತೋರಿಸಲು ಪೊಲೀಸರಿಗೆ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ನೀಡಿದ್ದೇನೆ . 1998 ನೇ ಸಾಲಿನಲ್ಲಿ ನಾನು ಮತ್ತು 1 ನೇ ಆರೋಪಿತರು ವಿವಾಹವಾಗಿದ್ದೇವೆ ಅದನ್ನು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ . ನಾನು 1 ನೇ ಆರೋಪಿತರ ವಿರುದ್ದ 2021 ನೇ ಸಾಲಿನಲ್ಲಿ ಜೀವನಾಂಶಕ್ಕಾಗಿ ಪ್ರಕರಣ ಒಂದನ್ನು ದಾಖಲಿಸಿದ್ದೇನೆ, ಅದು ಇನ್ನೂ ಚಾಲ್ತಿಯಲ್ಲಿ ಇದೆ ಎಂದರೆ ಸರಿ . ಸದರಿ ಪ್ರಕರಣದಲ್ಲಿ 1 ನೇ ಆರೋಪಿತರು ನನಗೂ ಅರ್ಜಿದಾರರಿಗೂ ವಿವಾಹವಾಗಿಲ್ಲ ಎಂದು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿ . ನಾನು ಮತ್ತು 1 ನೇ ಆರೋಪಿತರು ಬೇರೆ ಬೇರೆ ಜಾತಿ ಎಂದರೆ ಸರಿ . ನಾನು ಮತ್ತು 1 ನೇ ಆರೋಪಿತರು ಒಟ್ಟಾಗಿ ವಾಸಿಸುತ್ತದ್ದೇವೆ ಎಂದು ತೋರಿಸಲು ಪೊಟೋಗಳ್ಳು ಪೊಲೀಸರಿಗೆ ನೀಡಿದ್ದೇನೆ . 1 ನೇ ಆರೋಪಿತರು ನನಗೆ ಮೋಸ ಮಾಡಿ ಮತ್ತೊಂದು ವಿವಾಹವಾಗಿದ್ದಾರೆ ಎಂದು ಅವರ ವಿರುದ್ದ ಯಾವುದೇ ದೂರು ನೀಡಿಲ್ಲ . 1 ನೇ ಆರೋಪಿತರ ವಿರುದ್ದ ದಾಂಪತ್ಯ ಪುರ್ನರ್ ಸ್ಥಾಪನಾ ಹಕ್ಕಿಗಾಗಿ ಕೋರಿ ಯಾವುದೇ ಪ್ರಕರಣ ದಾಖಲಿಸಿದ್ದೀರಾ ಎಂದರೆ ನಾನು ಮತ್ತು 1 ನೇ ಆರೋಪಿತರು ಒಬ್ಬರಿಗೊಬ್ಬರು ಭೇಟಿ ಮಾಡಿ ಮಾತನಾಡುತ್ತಿದ್ದೆವು ಒಟ್ಟಾಗಿ ವಾಸಿಸುತ್ತಿದ್ದೆವು, ಆದುದರಿಂದ ಪ್ರಕರಣ ದಾಖಲಿಸಿಲ್ಲ ಎಂದು ತಿಳಿಸಿದ್ದಾರೆ . 1 ನೇ ಆರೋಪಿತರು ನನ್ನ ಗಂಡನಲ್ಲ , ಚಾಸಾ-2 ಮತ್ತು ಹೇಮ ಪ್ರಸಾದ್ ರವರು ನನ್ನ ಮತ್ತು 1 ನೇ ಆರೋಪಿತರ ದಾಂಪತ್ಯಕ್ಕೆ ಜನಿಸಿದ ಮಕ್ಕಳಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮೇಲೆ ಹೇಳಿದ ಸ್ವತ್ತು 1 ನೇ ಆರೋಪಿತರ ಎರಡನೇ ಪತ್ನಿಗೆ ಸೇರಿದ ಸ್ವತ್ತಾಗಿದೆ . ಪ್ರಸ್ತುತ ಅದು 1 ಮತ್ತು 3 ನೇ ಆರೋಪಿತರುಗಳ ಜಂಟಿ ಖಾತೆಯಲ್ಲಿ ಇರುತ್ತದೆ . ಸದರಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಮುಂತಾದ ದಾಖಲೆಗಳನ್ನು ಸೃಷ್ಟಿಸಿಕೊಂಡು 1 ನೇ

ಆರೋಪಿತರು ನನ್ನ ಗಂಡ ಚಾಸಾ-2 ಮತ್ತು ಹೇಮ ಪ್ರಸಾದ್ ರವರು ನನ್ನ ಮತ್ತು 1 ನೇ ಆರೋಪಿತರ ದಾಂಪತ್ಯಕ್ಕೆ ಜನಿಸಿದ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿತರು 1 ನೇ ಆರೋಪಿತರ ಮಗ ಎಂದರೆ ಸರಿ . 3 ನೇ ಆರೋಪಿತರ ತಾಯಿಯ ಹೆಸರು ಗಂಗಮ್ಮ . 1 ನೇ ಆರೋಪಿತರು ಮತ್ತು ಗಂಗಮ್ಮ ನವರ ವಿವಾಹ ನಡೆದು ಎಷ್ಟು ವರ್ಷಗಳು ಆಗಿವೆ ಎಂದರೆ ಸಾಕ್ಷಿಯು ನಿಖರವಾಗಿ ತಿಳಿದಿಲ್ಲ, ಅವರ ವಿವಾಹದ ಬಗ್ಗೆ ನನಗೆ ಮಾಹಿತಿ ತಿಳಿದಾಗ ನನ್ನ ಮಗಳು ಹೇಮ ಪ್ರಸಾದ್ ರವರಿಗೆ 2 1/2 ವರ್ಷ ಆಗಿತ್ತು ಎಂದು ತಿಳಿಸಿದ್ದಾರೆ . ಪ್ರಸ್ತುತ ಹೇಮ ಪ್ರಸಾದ್ ರವರಿಗೆ 24 ವರ್ಷ ಆಗಿದೆ . 1 ನೇ ಆರೋಪಿತರು ಮತ್ತು ಗಂಗಮ್ಮ ಗಂಡ ಹೆಂಡತಿ ಆಗಿದ್ದು 3 ನೇ ಆರೋಪಿತರು ಮಾತ್ರ ಅವರ ಒಬ್ಬನೇ ಮಗನಾಗಿದ್ದಾನೆ , ನಾನು ಮತ್ತು 1 ನೇ ಆರೋಪಿತರು ವಿವಾಹ ಆಗಿಲ್ಲ ಎಂದರೆ ಸರಿಯಲ್ಲ .

ದೂರನ್ನು ನಾನೇ ಬರೆಸಿದ್ದೇನೆ . ನಾನು ಆರೋಪಿತರುಗಳ ಸ್ವತ್ತಿಗೆ ಹೋಗಿ ಗಲಾಟೆ ಮಾಡಿದ್ದೇನೆ ಆರೋಪಿತರುಗಳು ದೂರು ನೀಡಿದರೂ ಸಹಾ ಪೊಲೀಸರು ಅದನ್ನು ಪಡೆದುಕೊಳ್ಳದೇ ನನ್ನ ದೂರನ್ನು ದಾಖಲಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ . ಆ ದಿನ ನಾವು ಹೋಗಿದ್ದ ಹೋಂಡ ಆಕ್ಟೀವಾ ವಾಹನದ ನೋಂದಣಿ ಸಂಖ್ಯೆ ಗೊತ್ತಿಲ್ಲ. ನಮ್ಮ ಗ್ರಾಮದಿಂದ ಕಾರೇಹಳ್ಳಿಗೆ ಹೋಗಬೇಕಾಗಿದ್ದಲ್ಲಿ ನಿಟ್ಟೂರು ರಸ್ತೆಯಿಂದ ಹೋಗಬೇಕು ಎಂದರೆ ಸರಿ . ನಿಟ್ಟೂರಿನ ಬಸ್ ನಿಲ್ದಾಣದಲ್ಲಿ ಪೊಲೀಸರು ಇರುತ್ತಾರೆ ಎಂದರೆ ಗೊತ್ತಿಲ್ಲ . ಆರೋಪಿತರುಗಳ ವಿರುದ್ದ ಪ್ರಕರಣ ದಾಖಲಿಸುವ ದುರುದ್ದೇಶದಿಂದ ಚಾಸಾ -3 ರವರಿಗೂ ಸಹಾ ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ . ನಾನು ಮತ್ತು ಚಾಸಾ -2 ಮೊದಲಿಗೆ ಹೋಗಿದ್ದೆವು ನಂತರ ನಾನು ಬರಲು ತಿಳಿಸಿದ್ದರಿಂದ ಚಾಸಾ -3 ರವರು ಬಂದಿದ್ದಾರೆ ಎಂದು ಸಾಕ್ಷಿ ಹೇಳಿದ್ದಾರೆ . ಚಾಸಾ -3 ರವರು ಯಾವ ವಾಹನದಲ್ಲಿ ಬಂದಿದ್ದರು ಎಂದು ಗೊತ್ತಿಲ್ಲ .

ನಾನು ಹೇಳುವಂತೆ ಆರೋಪಿತರುಗಳು ನಮ್ಮನ್ನು ತಳ್ಳಿಲ್ಲ , ಹಲ್ಲೆ ಮಾಡಿಲ್ಲ , ವಾಹನದ ಗಾಳಿಯನ್ನು ತೆಗೆದಿಲ್ಲ , ಅವಾಶ್ಯ ಶಬ್ದಗಳಿಂದ ನಿಂದಿಸಿಲ್ಲ ಎಂದರೆ ಸರಿಯಲ್ಲ . 1 ನೇ ಆರೋಪಿತರ ವಿರುದ್ದ ಸ್ವತ್ತಿನಲ್ಲಿ ಭಾಗಾಂಶ ಕೋರಿ ನನ್ನ ಮಕ್ಕಳ ಮೂಲಕ ದಾವೆ ಸಲ್ಲಿಸಲು ವಕೀಲರಿಗೆ

ದಾಖಲೆಗಳನ್ನು ಮತ್ತು ಮಾಹಿತಿಯನ್ನು ನೀಡಿದ್ದೇನೆ, ದಾವೆ ಇನ್ನು ದಾಖಲಾಗಿಲ್ಲ . 1 ನೇ ಆರೋಪಿತರಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ವಿವರಗಳ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ . ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ 1 ನೇ ಆರೋಪಿತರಿಗೆ ಕರೆ ಮಾಡಿಲ್ಲ , ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ . ನಾನು ಹೇಳುವಂತೆ ಯಾವುದೇ ಸ್ಥಳದಲ್ಲಿ ಮಹಜರು ಕ್ರಮ ಜರುಗಿಸಿಲ್ಲ . ಠಾಣೆಯಲ್ಲಿ ಕುಳಿತು ನಿಪಿ -3 ನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ . ಕೃತ್ಯ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ವೈದ್ಯರಿಗೆ ಸುಳ್ಳು ಹೇಳಿ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

Sd/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.